**ಸರ್ವವನ್ನು ಮಾಡಿಸುವನು ಶ್ರೀಕೃಷ್ಣ. ಅವನನ್ನು ಸರ್ವ ಎಂದು ಉಪಾಸನೆ ಮಾಡಬೇಕು ಎಂದು ಶಾಸ್ತ್ರ ಹೇಳುತ್ತದೆ.**



ಒಂದು ನಿರೂಪಣೆ.

ಅರ್ಜುನ ತಾನು ಸರ್ವವನ್ನು ತಿಳಿದಿದ್ದೇನೆ ಎಂದು ತಿಳಿದಿದ್ದ. ಯುದ್ಧಕ್ಕೆ ಹಾತೊರೆತಿದ್ದ. ಕರ್ಣನನ್ನ 'ಕೊಂದೆ ಬಿಡುತ್ತೇನೆ' ಎಂದು ಹುಮ್ಮಸ್ಸಿನಿಂದ ಯುದ್ಧರಂಗ ಪ್ರವೇಶ ಮಾಡಿದ. ಕೃಷ್ಣಾರ್ಜುನರ ಶಂಖನಾದ ಮೊಳಗಿತು. 'ನನ್ನನ್ನು ಎರಡು ಸೈನ್ಯ ಮಧ್ಯದಲ್ಲಿ ನಿಲ್ಲಿಸು, ನಾನು ಶತೃಗಳ ಪರಾಕ್ರಮಿಗಳನ್ನು ನೋಡಬೇಕು' ಎಂದು ಸಾರಥಿ ಕೃಷ್ಣನಿಗೆ ತಿಳಿಸಿದ ಅರ್ಜುನ. ಆ ಕ್ಷಣದಲ್ಲಿ ಕೃಷ್ಣ ರಥವನ್ನು ಗುರುಗಳ ಮುಂದೆ ನಿಲ್ಲಿಸಿದ.

ಏನಾಯ್ತು ?

ಸ್ವಜನರನ್ನು ಕಂಡು , ಆಚಾರ್ಯರನ್ನು ಕಂಡು ಮನೋದೌರ್ಭಲ್ಯದಿಂದ ವಿಷಾದವನ್ನು ವ್ಯಕ್ತ ಪಡಿಸಿದ ಅರ್ಜುನ. ಯುದ್ಧ ಬೇಡ ಎಂದ. ಘೋರ ಯುದ್ಧ ಬೇಡ, ಸನ್ಯಾಸಿ ಆಗುತ್ತೇನೆ ಎಂದ. ಪ್ರಜ್ಞೆ ಇಲ್ಲದೆ ಬಡಬಡಿಸಿದ. ಇದು ಇಂದ್ರನ ಪರಿಸ್ಥಿತಿ.

ಕೃಷ್ಣ ಒಳಗೆ ನಕ್ಕು, ಇಂದ್ರನಾದ ಅರ್ಜುನಗೆ ಉಪದೇಶ ಮಾಡಿದ. ಕರ್ಮ - ಅಕರ್ಮ - ವಿಕರ್ಮಗಳ ಪರಿಚಯ ಮಾಡಿದ. ಸ್ಥಿತಪ್ರಜ್ಞರ, ನಿಷ್ಕಾಮ ಕರ್ಮದ, ರಾಗ ದ್ವೇಷದಿಂದ ಸನ್ಯಾಸ , ಧ್ಯಾನ ಹೀಗೆ ಎಲ್ಲ ಉಪದೇಶ ಮಾಡಿದ. ಮತ್ತೆ ಕೊನೆಗೆ ಅರ್ಜುನ ಮೋಹದಿಂದ ಲಿಪ್ತನಾದ. ನಿನ್ನ ರೂಪ ತೋರಿಸು ಎಂದು ಕೇಳಿಕೊಂಡ. ಕೃಷ್ಣ ವಿಶ್ವರೂಪ ತೋರಿಸಿದ. ಅನಂತವಾದ ವಿಶ್ವರೊಪವನ್ನು ನೋಡಿ ಕೈ ಮುಗಿದು, ಅರ್ಜುನ ಹೀಗೆ ಹೊಗಳಿದ.

नमः पुरस्तादथ पृष्ठतस्ते
नमोSस्तु ते सर्वत एव सर्व
अनन्तवीर्यामितविक्रमसत्वं
सर्वं समाप्नोसि ततोSसी सर्वः

ನಿನಗೆ ಎಲ್ಲಾದಿಕ್ಕುಗಳಿಂದ ನಮಸ್ಕಾರ. ಯಾಕೆಂದರೆ ನನಿಗೆ ಎಲ್ಲ ದಿಕ್ಕುಗಳಲ್ಲಿ ನಿನ್ನ ವಿಶ್ವರೂಪ ಕಾಣಿಸುತ್ತಿದೆ. ನೀನು ಪೂರ್ಣ ಎಂದು ಈಗ ತಿಳಿಯಿತು. ನೀನು ಜಗತ್ತಿಗೆ ಮುಖ್ಯ ಆಶ್ರಯ. ನೀನು ಅನಂತ ವೀರ್ಯ ಉಳ್ಳವನು. ಅನಂತ ಪರಾಕ್ರಮ ಉಳ್ಳವನು. ಈ ಎಲ್ಲಾ ವಿಶ್ವವನ್ನು ವ್ಯಾಪಿಸಿರುವವನು. ಆದ್ದರಿಂದ ನೀನು ಸರ್ವ ಎನಿಸಿರುವವನು.

ಇಲ್ಲಿ ಅರ್ಜುನ ಪರಮಾತ್ಮನನ್ನ ಸರ್ವ ಎಂದು ಉಪಾಸನೆ ಮಾಡುತ್ತಾನೆ. ಪ್ರತ್ಯಕ್ಷ ಕಂಡಿದ್ದಾನೆ. ಜ್ಞಾನವನ್ನು ಪಡೆದಿದ್ದಾನೆ. ಅಂದರೆ ಇಂದ್ರ ದೊಡ್ಡ ಅಧಿಕಾರಿ. ಅವನಿಗೂ ತಿರೋಧಾನ ಬಂತು. ಕೃಷ್ಣ ಸರಿಪಡಿಸಿದ.

ನಾವು ಕೂಡ ತುಂಬಾ ಅಲ್ಪರಾದರು, ಪರಮ ಪಾಪಿಗಳಾದರೂ, ಅಜ್ಞಾನಿಗಳಾದರೂ ... ನಮಗೂ ಎಲ್ಲಾ ಗೊತ್ತು ಎಂಬ ಬ್ರಾಂತಿಯಲ್ಲಿ ಇರುತ್ತೇವೆ. ನಾವು ಇನ್ನಾದರೂ ಪರಮಾತ್ಮನನ್ನ ಸರ್ವ ಎಂದು ಉಪಾಸನೆ ಮಾಡಬೇಕು. ನಮಗೂ ಕೃಷ್ಣ ಅಂತರಂಗದಲ್ಲಿ ,ನಮ್ಮ ಹೃದಯಾಕಾಶದಲ್ಲಿ ಉಪದೇಶ ಮಾಡುತ್ತಾನೆ. ಇದೆ ರಹಸ್ಯ.

ಅವನನ್ನು ಸರ್ವಂ/ಸರ್ವ ಎಂದು ಉಪಾಸನೆ ಮಾಡಬೇಕು ಎಂದು ಶಾಸ್ತ್ರ ಹೇಳುತ್ತದೆ.

(ಸರ್ವಂ ಅಂದರೆ ಗುಣ ಪೂರ್ಣನಾದವನು ಎಂದು ಅರ್ಥ.)

ವರುಣ ವಿರಕ್ತನಾಗಿ ಕಪ್ಪೆಯ ರೂಪದಲ್ಲಿ ವಿಶ್ವ, ತೈಜಸ, ಪ್ರಾಜ್ಞ, ತುರಿಯ ಎಂಬ ನಾಲ್ಕು ರೂಪಗಳನ್ನು ಉಪಾಸನೆ ಮಾಡಿದ. ಅಥರ್ವವೇದಕ್ಕೆ ಸಂಬಂಧಪಟ್ಟ ಮಾಂಡೂಕೋಪನಿಷದ್ ವರುಣನಿಂದ ದೃಷ್ಟವಾಯಿತು

ಭಗವಂತನನ್ನ ಏನಂತ ಉಪಾಸನೆ ಮಾಡಿದ ?

**ಓಮಿತ್ಯೇತದಕ್ಷರಮಿದಂ ಸರ್ವಂ |**
**ತಸ್ಯೋಪಾಖ್ಯಾನಂ ಭೂತಂ ಭವದ್ ಭವಿಷ್ಯತಿ |**
**ಸರ್ವಮೊಂಕಾರ ಏವ |**
**ಯಚ್ಚಾನ್ಯತ್ ತ್ರಿಕಾಲಾತೀತಮ್ ತದಪ್ಯೊಂಕಾರ ಏವ |**
**ಸರ್ವಂ ಹ್ಯೇತತ್ ಬ್ರಹ್ಮ | ಅಯಮಾತ್ಮಾ ಬ್ರಹ್ಮ |**

ಮಂಡೂಕ ರೂಪದಲ್ಲಿರುವ ವರುಣ 'ಸರ್ವಂ' ಎಂದು ಓಂಕಾರ ರೂಪನಾದ ಅಕ್ಷರ ಪರಬ್ರಹ್ಮನನ್ನು ಉಪಾಸನೆ ಮಾಡಿದ. (ಅಕ್ಷರ ಎಂದು ಲಕ್ಷ್ಮಿ ದೇವಿನೂ ಕರೆಸುಕೊಳ್ಳುತ್ತಾಳೆ. ಆದರೆ ಅವಳು ಮಧ್ಯಮ ಅಕ್ಷರ. ಉತ್ತಮ ಅಕ್ಷರ ಅಂದರೆ ಅದು ಮುಖ್ಯವೃತ್ತಿ ಯಿಂದ ಹರಿ ಮಾತ್ರ ಎಂದಿಟ್ಟುಕೊಳ್ಳಬೇಕು ಎಂದು ತಿಳಿಸಿದ್ದಾರೆ. )

ಆಚಾರ್ಯರು ನೈರ್ಗುಣ್ಯ ಎನ್ನುವ ಶ್ರುತಿ ಪ್ರಮಾಣದಿಂದ 'ಸರ್ವಂ' ಅಂದರೆ ಪೂರ್ಣ ಮತ್ತು ಅದು ಶ್ರೀಹರಿಯೇ ಎಂದು ಎಂದು ಪ್ರತಿಪಾದಿಸುತ್ತಾರೆ.

......सर्वमिति पूर्णत्वं तन्नन्यस्य हरे: क्वचित् |
.... ಸರ್ವಮಿತಿ ಪೂರ್ಣತ್ವಮ್ ತನ್ನಾನ್ಯಸ್ಯ ಹರೇ: ಕ್ವಚಿತ್ |

ಓಂ ಎನಿಸಿದ ಹರಿ, ಸರ್ವಂ ಅಂದರೆ ಪೂರ್ಣನಾಗಿದ್ದಾನೆ. ಇತರರಲ್ಲಿ ಈ ಪೂರ್ಣತ್ವ ಇಲ್ಲ ಎಂದು ಉಪನಿಷದ್ ತಿಳಿಸುತ್ತದೆ.

ಇಲ್ಲಿ ಯಾಕೆ ಸರ್ವಂ ಎಂದು ಉಪಾಸನೆ ಮಾಡಬೇಕು. ? ಯಾಕೆ ಅಂದರೆ ಅವನು ಇಚ್ಚಾ ಮಾತ್ರದಿಂದ ಸೃಷ್ಟಿಯನ್ನು ಮಾಡುತ್ತಾನೆ. ಅನಾಯಾಸವಾಗಿ ಎಲ್ಲ ಲೋಕಗಳನ್ನು ಸೃಷ್ಟಿ ಮಾಡುತ್ತಾನೆ. ಅವನಿಗೆ ಪೂರ್ಣಶಕ್ತಿ ಇದೆ ಎಂದು ಒಪ್ಪಲೇಬೇಕು ಎಂದು ಉಪನಿಷದ್ ತಿಳಿಸುತ್ತದೆ.

ಭಗವಂತನು ಪೂರ್ಣನಾದರೆ ಈ ಸೃಷ್ಟಿಯಿಂದ ಏನು ಪ್ರಯೋಜನ ಎಂಬ ಶಂಕೆಗೆ, ಅವನಿಗೆ ಯಾವ ಪ್ರಯೋಜನ ಇಲ್ಲ ಅದು ಅವನ ಸ್ವಭಾವ ಮಾತ್ರ. ಯಾಕೆಂದರೆ, ಅವನು ಈಗಲೇ ಪೂರ್ಣ/ಸರ್ವಂ ಎಂದು ಹೇಳಲಾಗಿದೆ.

ನಾಲ್ಕು ರೂಪಗಳು - ವಿಶ್ವ, ತೈಜಸ, ಪ್ರಾಜ್ಞ, ತುರಿಯ ಪೂರ್ಣವೆಂದು ಉಪಾಸನೆ ಮಾಡಬೇಕು. ಆ ರೂಪಗಳ ಕ್ರಿಯೆಗಳು ಪೂರ್ಣ, ಶಕ್ತಿನೂ ಪೂರ್ಣ.

ರಾಯರು ಬ್ರಹ್ಮಸೂತ್ರ ಉದಾಹರಿಸಿ **ॐ न स्थानतोपि परस्योभयलिङ्गं सर्वत्रहि ॐ** (३-२-११) , ಎಲ್ಲ ಅವತಾರಗಳು ಪೂರ್ಣವೇ ಹೊರತು ,ನ್ಯೂನತೆ ಇಲ್ಲ ಎಂದು ಸ್ಪಷ್ಟ ಪಡಿಸುತ್ತಾರೆ.

ಆಚಾರ್ಯರು ಉಪನಿಷದ್ ಕೊನೆಯಲ್ಲಿ ಹೀಗೆ ತಿಳಿಸುತ್ತಾರೆ. ಕೆಲವರು ಉಪನಿಷದ್ ಓದದೇ ಅಪಾರ್ಥ ಮಾಡುತ್ತಾರೆ.

एकोऽपि निर्विसेशोऽपि चतुर्धा व्यवहारभाक |
यस्तं वन्दे चिदात्मानं विष्णुं विश्वादिरोपिणम् ||

ಅವನು ಒಬ್ಬನೇ. ಹಲವಾರುರೂಪಗಳು ಇದ್ದರೂ, ಎಲ್ಲವೂ ಪೂರ್ಣ. ವಿಶ್ವ ಮೊದಲಾದ ನಾಲ್ಕುರೂಪಗಳು ಪೂರ್ಣವೇ. ಜ್ಞಾನರೂಪಿಯಾದ ಅಂತಹ ವಿಷ್ಣುವಿಗೆ ನಮಸ್ಕರಿಸುತ್ತೇನೆ.

ಹೀಗೆ ವರುಣ ಪರಮಾತ್ಮನನ್ನ ಸರ್ವಂ ಎಂದು ಉಪಾಸನೆ ಮಾಡಿ ವೇದ ದ್ರಷ್ಟಾರನಾದ.

ಸರ್ವ ಎಂದರೆ ಸಮಸ್ತಕ್ಕೂ ಒಡೆಯ. ಗೀತಾಭಾಷ್ಯದಲ್ಲಿ ಆಚಾರ್ಯರು ಪದ್ಮ ಪುರಾಣ ಉಲ್ಲೇಖಿಸಿ ಎಲ್ಲವೂ ಯಾರ ಅಧೀನವೋ , ಅವನನ್ನು ಋಷಿಗಳು ಸರ್ವ ಎನ್ನುತ್ತಾರೇ.
ತ್ವದಧೀನಂ ಯತ: ಸರ್ವಂ ಆತ: ಸರ್ವೋ ಭವಾನಿತಿ |
ವದಂತಿ ಮುನಯಃ: ಸರ್ವೇ ನ ತು ಸರ್ವ ರೂಪತ: || ಇತಿ ಪದ್ಮೇ

ವಿಭೀಷಣ ತನ್ನ ಅಣ್ಣನಾದ ರಾವಣನ ಜೊತೆ ಕಾದಾಡಿ, ಅಲ್ಲಿ ಇರಲು ಮನಸ್ಸು ಒಪ್ಪದೇ, ರಾಮನ ಹತ್ತಿರ ಬಂದು ಹೀಗೆ ಹೇಳುತ್ತಾನೆ.

अनुजो रावणस्य अहम् तेन च अस्मि अवमानितः || ६-१९-४
भवन्तम् सर्व भूतानाम् शरण्यम् शरणम् गतः |

ನಾನು ರಾವಣನ ತಮ್ಮ. ನಾನು ರಾವಣನಿಂದ ಅವಮಾನಿತನಾಗಿ ಬಂದಿದ್ದೇನೆ. ಎಲ್ಲ ಜೀವರಾಶಿಗಳು ನಿನ್ನಲಿ ಶರಣುಹೊಂದುತ್ತೇವೆ ಹಾಗೆ ನಾನು ಕೂಡ ನಿನ್ನಲ್ಲಿ ಶರಣಾಗತನಾಗಲು ಬಂದಿದ್ದೇನೆ.

परित्यक्ता मया लंका मित्राणि च धनानि च || ६-१९-५
भवद् गतम् हि मे राज्यम् च जीवितम् च सुखानि च |

ನನ್ನ ಸ್ನೇಹಿತರನ್ನು, ಲಂಕೆಯನ್ನು, ನನ್ನ ಆಸ್ತಿ ಅಂತಸ್ತುಗಳನ್ನು , ರಾಜ್ಯವನ್ನು , ರಾಜ್ಯದ ಜೀವನ ಮತ್ತು ಸುಖವನ್ನು ಎಲ್ಲವನ್ನು ಬಿಟ್ಟು ನಿನ್ನಲ್ಲಿ ಶರಣು ಹೋಗಲು ಬಂದಿದ್ದೇನೆ.

ವಿಭೀಷಣ ರಾಮನನ್ನು ಸರ್ವ ಎಂದು ತಿಳಿದಿದ್ದಾನೆ. ಎಲ್ಲವೂ ಅವನ ಅಧೀನ , ಅವನು ಒಡೆಯ , ಸ್ವಾಮಿ ಎಂದು ಅರಿತಿದ್ದಾನೆ.

ಪರಮಾತ್ಮ ಎಲ್ಲರಿಗೂ ಹೇಗೆ ಒಡೆಯನಾಗಿದ್ದಾನೆ ?
ಎಂಬ ಪ್ರಶ್ನೆಗೆ ಅಥರ್ವಣ ಉಪನಿಷದ್ ಹೇಳುತ್ತದೆ 'ಯ: ಸರ್ವಜ್ಞ: ಸರ್ವವಿತ್ ......'
ಅವನು ಎಲ್ಲವೂ ತಿಳಿದಿದ್ದಾನೆ ಆದ್ದರಿಂದ ಸರ್ವಜ್ಞ. ಬರೀ ಸಾಮಾನ್ಯ ಜ್ಞಾನ ಅಲ್ಲ, 'ಸರ್ವವಿತ್' ಎಲ್ಲವೂ ಪೂರ್ಣವಾಗಿ, ವಿಶೇಷವಾಗಿ, ಅಸಾಧಾರಣವಾಗಿ ತಿಳಿದಿದ್ದಾನೆ. ಆದ್ದರಿಂದ ಅವನು ಪೂರ್ಣನು ಹೌದು ಮತ್ತು ಎಲ್ಲರಿಗೂ ಒಡೆಯನೂ ಹೌದು.

ಸರ್ವ: ಸಂಪೂರ್ಣ ಸಾಮರ್ಥ್ಯಾತ್ ... ಭಾ.ತಾ.ನಿ

ವಿಷ್ಣುಸಹಸ್ರನಾಮದಲ್ಲಿ ಭೀಷ್ಮರು ಕೃಷ್ಣನ್ನ 'ಸರ್ವ' 'ಸರ್ವಾದಿ' 'ಸರ್ವವಿತ್'' 'ಸರ್ವದೃಕ್' ಇತ್ಯಾದಿ ಗುಣಗಳನ್ನ ಹಾಡಿದ್ದಾರೆ.

ಅಪರೋಕ್ಷ ಜ್ಞಾನ ಬರಬೇಕಾದರೆ, ವಾಸುದೇವನನ್ನ ಸರ್ವ ಎಂದು ಉಪಾಸನೆ ಮಾಡಬೇಕು. ಹೀಗೆ ಕೃಷ್ಣ ತಿಳಿಸುತ್ತಾನೆ.

**ಬಹೂನಾಮ್ ಜನ್ಮನಾಮಂತೆ ಜ್ಞಾನವಾನ್ ಮಾಂ ಪ್ರಪದ್ಯತೇ |**
**ವಾಸುದೇವ: ಸರ್ವಮಿತಿ ಸ ಮಹಾತ್ಮಾ ಸುದುರ್ಲಭ: || - ಗೀ. .**

ಆಚಾರ್ಯರು ನಮಗೆ "ಸರ್ವಮೂಲ" ಅಂದರೆ ಪೂರ್ಣವಾದ ಎಲ್ಲದಕ್ಕೂ ಮೂಲ ಅಂದರೆ ಕಾರಣವಾದ ಪರಮಾತ್ಮನ ಸ್ವರೂಪವನ್ನು ತಮ್ಮ ಗ್ರಂಥಗಳಲ್ಲಿ ತಿಳಿಸಿದ್ದಾರೆ.

ಇಲ್ಲಿಗೆ ಸರ್ವಾಂತರ್ಯಾಮಿಯಾದ, ಸರ್ವಗತನಾದ, ಸರ್ವಶಕ್ತಿಯಾದ, ಸರ್ವಭೋಕ್ತೃವಾದ, ಸರ್ವಕತೃವಾದ, ಸರ್ವವ್ಯಾಪಿಯಾದ, ಸರ್ವರೂಪನಾದ, ಸರ್ವವಂದ್ಯನಾದ, ಸರ್ವಜ್ಞನಾದ , ಸರ್ವಸ್ರಷ್ಟಾರನಾದ, ಸರ್ವಒಡೆಯನಾದ, ಸರ್ವ(ಪೂರ್ಣ)ನಾದ, ಸರ್ವವೇದಪ್ರತಿಪಾದ್ಯನಾದ, ಸರ್ವಚಕ್ಷುವಾದ, ಸರ್ವಭಕ್ಷಕನಾದ, ಸರ್ವಗುಣಪೂರ್ಣನಾದ. ಸರ್ವಕಾರಣನಾದ ಮೋಕ್ಷಪ್ರದ ವಾಸುದೇವರೂಪಿ ಪರಮಾತ್ಮನ ಪಾದಾರವಿಂದದಲ್ಲಿ ಈ ಸಣ್ಣ ಲೇಖನ ಸಮರ್ಪಣೆ.

- Bheemasena Rao raocan@yahoo.com

ಗುರ್ವನ್ತರ್ಗತ ಶ್ರೀಕೃಷ್ಣಾರ್ಪಣಮಸ್ತು